# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ



## ಯಾವ ಮೋಹನ ಮುರಲಿ ಕರೆಯಿತು...

ಅಷ್ಟರಲ್ಲಿ ರೂಮನ್ನು ವ್ಯಕ್ತಿಯೊಬ್ಬರು ಪ್ರವೇಶಿಸಿದ್ದರು. ಕಣ್ಣಿನ ರೆಪ್ಪೆ ಮತ್ತು ಹುಬ್ಬುಗಳಿಗೆ ಬಳಿದಿದ್ದ ಕಾಡಿಗೆ ಲೈಟ್ ಬೆಳಕಿನೊಂದಿಗೆ ಸಂಯೋಜನೆಗೊಂಡು ಪ್ರತಿಫಲಿಸುತ್ತಿತ್ತು. ಆತ ನಗುತ್ತಾ ರಾಘವರೆಡ್ಡಿಯ ಕಡೆ ನೋಡಿ, 'ಓಹ್ ಯಾವಾಗ ಬಂದೆ ರಾಘವಣ್ಣ? ಅಪರೂಪ ಆಗ್ಬಿಟ್ರಲ್ಲ. ಅಣ್ಣ ಸತ್ಯನಾರಾಯಣಡು ಚೆನ್ನಾಗಿದ್ದಾರಾ?' ಎಂದು ವಿಚಾರಿಸಿಕೊಂಡಿದ್ದ. ಆತ ಹಾಕಿಕೊಂಡಿದ್ದ ಸೆಂಟ್ ರಪ್ಪನೆ ಮೂಗಿಗೆ ಬಡಿದಿತ್ತು. ರಾಘವರೆಡ್ಡಿ ನನ್ನ ಕಡೆ ನೋಡಿ, 'ಅಜಮ್ ಖಾನ್ ತಮ್ಮ ಯೂಸೂಫ್ ಖಾನ್ ಅಂತ. ದಿಲ್ಲಿಯಲ್ಲಿ ಲೆದರ್ ಪ್ರಾಡಕ್ಟ್ಸ್ ಕಂಪನಿ ಇಟ್ಕೊಂಡಿದಾರೆ. ವರ್ಷಕ್ಕೆ ನೂರಾರು ಕೋಟಿ ಎಕ್ಸ್‌ಪೋರ್ಟ್ ಬಿಸಿನೆಸ್ ಕೂಡಾ ಇದೆ. ಸದಾ ಯೂರೋಪ್, ಅಮೆರಿಕ ಸುತ್ತುತ್ತಿರುತ್ತಾರೆ. ಆದರೆ ವರ್ಷಕ್ಕೊಮ್ಮೆ ರಂಜಾನ್ ಹಬ್ಬದಲ್ಲಿ ಒಂದು ವಾರ ಸ್ವಂತ ಹಳ್ಳಿಯಲ್ಲಿ ಇದ್ದುಬಿಡ್ತಾರೆ. ಹಬ್ಬದ ದಿನ ಇಡೀ ತಾಲ್ಲೂಕಿನ ಜನಕ್ಕೆ ಮಟನ್ ಬಿರಿಯಾನಿ ಸಮಾರಾಧನೆ ಆಗ್ತದೆ. ತಾಲ್ಲೂಕಿನ ಎಲ್ಲಾ ಜಾತಿಯ, ಧರ್ಮಗಳ ಬಡವರಿಗೆ ಅವೊತ್ತು ಎರಡೆರಡು ಸಾವಿರ ದಾನ ಮಾಡ್ತಾರೆ. ಐದಾರು ವರ್ಷಗಳ ಹಿಂದೆ ಟೈಮ್ಸ್ ಪತ್ರಿಕೆಯಲ್ಲಿ ಇವರ ಬಗ್ಗೆ ಒಂದು ಪೇಜ್ ಪೂರ್ತಿ ಆರ್ಟಿಕಲ್ ಬಂದಿತ್ತು. ಅಣ್ಣ ಸತ್ಯನಾರಾಯಣಡುವಿನ ಎಲೆಕ್ಷನ್ ಟೈಮಿನಲ್ಲಿ ಎರಡು ದಿನ ಕ್ಷೇತ್ರದಲ್ಲಿ ಓಡಾಡ್ತಾರೆ. ನಮ್ಮ ಚಿರಂಜೀವಿ ತಮ್ಮ ಪವನ್ ಕಲ್ಯಾಣ್ ಕ್ಲೋಸ್ ಫ್ರೆಂಡ್. ಅವ ದಿಲ್ಲಿಗೆ ಬಂದ್ರೆ ಯೂಸುಫ್ ಖಾನ್ ಮನೆಯಲ್ಲೇ ಉಳಿದುಕೊಳ್ಳೋದು. ರಾಜಕೀಯಕ್ಕೆ ಇಳಿಬೇಡ ಅಂತ ಯೂಸುಫ್ ಖಾನ್ ಇಷ್ಟಿಲ್ದೆ ಬಡಕೊಂಡ್ರೂ ಪವನ್ ಕಲ್ಯಾಣ್ ಕೇಳಲಿಲ್ಲ. ಎಲ್ರೂ ಎನ್ಟಿಆರ್ ಆಗೋದಕ್ಕೆ ಸಾಧ್ಯಾನಾ?' ಎಂದು ಯೂಸುಫ್ ಖಾನನನ್ನು ಪರಿಚಯ ಮಾಡಿಕೊಟ್ಟಿದ್ದ. ಯೂಸೂಫ್ ಖಾನ್ ನಗುತ್ತಾ ಕೈ ಮುಗಿದಾಗ ನಾನೂ ಕೈ ಮುಗಿದಿದ್ದೆ. ಅಜೀಮ್ ಖಾನ್, 'ಯೂಸುಫ್ ಇವರಿಗೆ ಡಿನ್ನರಿಗೆ ಅರೆಂಜ್ ಮಾಡು. ಹಾಗೆ ನೀನೂ ಇಲ್ಲೇ ಊಟ ಮಾಡಿಕೊಂಡು ಹೋಗು. ಐದು ನಿಮಿಷ ಬರ್ತೀನಿ' ಎಂದು ರೂಮಿನಿಂದ ಹೊರಹೋಗಿದ್ದ.

ಯೂಸುಫ್ ಖಾನ್ ಯಾರದೋ ಫೋನ್ ಅಟೆಂಡ್ ಮಾಡಿ 'ಏನು ತಗೋತಿರಾ?' ಎಂದು ಕೇಳಿದ್ದ. 'ಏನಾದರೂ ಆಗಬಹುದು' ಎಂದಿದ್ದ ರಾಘವರೆಡ್ಡಿ. ಎರಡು ಗ್ಲಾಸುಗಳಿಗೆ ತಾನೇ ಐಸ್ ವೈನನ್ನು ತುಂಬಿ ನಮಗಿಬ್ಬರಿಗೂ ಕೊಟ್ಟಿದ್ದ ಯೂಸುಫ್ ಖಾನ್. ತಿನ್ನಲು ಬಿಸಿಬಿಸಿ ಫಿಶ್, ಮಟನ್ ಮತ್ತು ಚಿಕನ್ ಖಾದ್ಯಗಳು ಬಂದಿದ್ದವು. ಯೂಸುಫ್ ಖಾನ್ ತಾನು ನಿಂಬು ಶರಬತ್ತನ್ನು ಕುಡಿಯುತ್ತಾ ಕಂಪನಿ ಕೊಡುತ್ತಿದ್ದ. ಹತ್ತು ನಿಮಿಷಗಳ ಬಳಿಕ ಅಜೀಮ್ ಖಾನ್ ಬಂದಿದ್ದ. ಅಜೀಮ್ ಖಾನನಿಗೂ ಒಂದು ಗ್ಲಾಸಿಗೆ ಐಸ್ ವೈನನ್ನು ತುಂಬಿ ಕೊಟ್ಟು ಯೂಸುಫ್ ಖಾನ್ ಹೊರಹೋಗಿದ್ದ.

'ಮದುವೆಯಾಗುವವರೆಗೂ ನಾನು ವೈನನ್ನಾಗಲೀ, ಬೇರೆ ಡ್ರಿಂಕ್ಸನ್ನಾಗಲೀ ಕಣ್ಣು ಬಿಟ್ಟು ಕೂಡಾ ನೋಡಿದವನಲ್ಲ. ಆದರೆ ನನ್ನ ಹೆಂಡತಿ ಲಂಡನ್ನಿನವಳಾದ್ದರಿಂದ ಅವಳು ಡೈಲಿ ಡ್ರಿಂಕ್ಸ್ ತಗೊತಾಳೆ. ಹಾಗಾಗಿ ನನಗೂ ರೂಢಿಯಾಗಿಹೋಯ್ತು. ಕಾಲೇಜು, ಸ್ಕೂಲಿಗೆ ಹೋಗುವ ನನ್ನ ಮಕ್ಕಳು ಸುನಾಯಾಸವಾಗಿ ಡೈಲಿ ಎರಡೆರಡು ಪೆಗ್ ವಿಸ್ಕಿಯನ್ನೋ ಅಥವಾ ವೈನನ್ನೋ ತೆಗೆದುಕೊಳ್ತಾರೆ. ನನ್ನ ತಮ್ಮ ಯೂಸುಫ್ ಮಾತ್ರ ಡ್ರಿಂಕ್ಸ್ ತಗೊಳ್ಳೋದಿಲ್ಲ. ಧರ್ಮ ಗ್ರಂಥಗಳು ಏನೇನೋ ಹೇಳುತ್ತವೆ. ಆದರೆ ಅವೆಲ್ಲ ಮಾನವೀಯವಾಗಿರುತ್ತವೆಂದು ಹೇಳಲು ಬರುವುದಿಲ್ಲ. ಏಕೆಂದರೆ, ಧರ್ಮ ಗ್ರಂಥಗಳನ್ನು ಬರೆದವರೆಲ್ಲಾ ರಕ್ತಮಾಂಸಗಳಿಂದ ರೂಪುಗೊಂಡ ಮನುಷ್ಯರೇ ಆಗಿರುವುದು. ನಾವು ಎಷ್ಟೇ ಧರ್ಮ ಪರಿಪಾಲಕರಾದರೂ ವ್ಯಾಪಾರದಲ್ಲಿ ಸುಳ್ಳು ಹೇಳದೆ, ವಂಚನೆ ಮಾಡದೆ ಇರಲು ಸಾಧ್ಯವೇ ಆಗುವುದಿಲ್ಲ' ಎಂದು ಅಜೀಮ್ ಖಾನ್ ದೀರ್ಘವಾದ ವೈನ್ ಗುಟುಕನ್ನು ಗುಟುಕರಿಸಿದ್ದ. ನಾನು ಕೇರಳದಲ್ಲಿ ಎಂಟು ದಿನಗಳ ಹಿಂದೆ ಫ್ಲೈಟ್ ಇಳಿದಾಗಿನಿಂದಲೂ ನನ್ನ ಒಡನಾಟಕ್ಕೆ ಬಂದ ರಾಘವರೆಡ್ಡಿಗೆ ಪರಿಚಯದ ಪ್ರತಿಯೊಬ್ಬ ವ್ಯಕ್ತಿಯೂ ವಿಚಿತ್ರ ವ್ಯಕ್ತಿತ್ವವುಳ್ಳವರೇ ಆಗಿದ್ದರು. ಜಗತ್ತಿನಲ್ಲಿ ಹುಟ್ಟಿದ ಕೋಟ್ಯಂತರ ಮಾನವಜೀವಿಗಳು ಹೇಗೆ ರೂಪ, ಲಕ್ಷಣ, ವರ್ತನೆಗಳಲ್ಲಿ ಭಿನ್ನತೆಯನ್ನು ಹೊಂದಿರುತ್ತಾರೆಂಬುದು ಕೂಡ ಒಂದು ವ್ಯಾಖ್ಯಾನಿಸಲಾಗದ ವಿಸ್ಮಯದ ಸಂಗತಿಯೇ ಆಗಿದೆ.

'ನಾನು ಹೆಂಡತಿಯಿಂದಾಗಿ ಡ್ರಿಂಕ್ಸ್ ಕುಡಿಯಲು ಶುರು ಮಾಡಿದ ಮೇಲೆ ನನ್ನಲ್ಲಿ ಒಂದು ರೀತಿಯ ಧೈರ್ಯ ಹುಟ್ಟಿ ಸತ್ಯವನ್ನು ಯಾವ ಭಯವೂ ಇಲ್ಲದೆ ಎದೆಯಿಂದ ಹೊರಹಾಕುವ ಶಕ್ತಿ ಬಂದಿದೆ. ನನ್ನ ಹೆಂಡತಿ ಕುಡಿದಾಗ ಎಂಥ ಪರ್ಸನಲ್ ಸಂಗತಿಗಳನ್ನೇ ಆಗಲಿ ಹೇಳಿಬಿಡುತ್ತಾಳೆ. ಅಂಥ ಒಂದು ಗುಣ ನನ್ನಲ್ಲೂ ಹುಟ್ಟಿಕೊಂಡಿದೆ' ಎಂದಾಗ ಅಜೀಮ್ ಖಾನ್ ಮೂರ್ನಾಲ್ಕು ಪೆಗ್ ವೈನ್ ಕುಡಿದಿದ್ದರೇನೋ. ನಾನು ಎರಡು ಪೆಗ್ ಕಂಪ್ಲೀಟ್ ಮಾಡಿದ್ದೆ. 'ಅಜೀಮ್ ಜಾಸ್ತಿ ಆಗ್ತಾ ಇದೆಯೇನೋ. ಡ್ರಿಂಕ್ಸ್ ಸಾಕು, ಬಿರಿಯಾನಿ ತಿನ್ನೋಣ' ಎಂದು ಹೇಳಿ ನನ್ನ ಕಡೆ ನೋಡಿ, 'ಇಂಥ ಬಿರಿಯಾನಿನ ಇದುವರೆಗೆ ನೀನೆಲ್ಲೂ ತಿಂದಿರೋದಿಲ್ಲ. ಬಾಯಿಯಲ್ಲಿ ಇಟ್ಟುಕೊಂಡ ತಕ್ಷಣ ಬೆಣ್ಣೆಯಂತೆ ಕರಗಿಹೋಗ್ತದೆ' ಎಂದಿದ್ದ ರಾಘವರೆಡ್ಡಿ.

ಯೂಸೂಫ್ ಖಾನ್ ಜೊತೆ ಇನ್ನಿಬ್ಬರು ರೂಮಿಗೆ ಬಂದಿದ್ದರು. ಹಬೆಯಾಡುವ ಊಟವನ್ನು ಡೈನಿಂಗ್ ಟೇಬಲ್ ಮೇಲಿಟ್ಟು ಅವರು ಹೊರಹೋಗಿದ್ದರು. ಯೂಸೂಫ್ ಖಾನ್ ಡೈನಿಂಗ್ ಟೇಬಲ್ ಮೇಲೆ ಮೂರು ಅಗಲವಾದ ಪಂಚಲೋಹದ ಗಂಗಾಳಗಳನ್ನು ಇಟ್ಟಿದ್ದ. ಅಜಮ್